# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ,
ದಾವಣಗೆರೆ–577 007.

## ವಿದ್ಯಾವಿಷಯಕ ಪರಿಷತ್
## ಸಾಮಾನ್ಯ ಸಭೆಯ ನಡಾವಳಿಗಳು
## ದಿನಾಂಕ:04.01.2025

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008


ः ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂದತೆ ಅಮೃತಂ ः

**ಸಂಖ್ಯೆ: ದಾವಿವಿ/ಪ್ರಾಧಿಕಾರ/ವಿವಿಪ/648/2024–25/ 3626** **ದಿನಾಂಕ:07.01.2025**

**ಗೆ,**

**ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ.**

ಮಾನ್ಯರೆ,

**ವಿಷಯ : ದಿನಾಂಕ:04.01.2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳು.**

*****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ–IIರ ಪ್ರಕರಣ 16(i)ರ ರೀತ್ಯ ದಿನಾಂಕ:04.01.2025 ರಂದು ಬೆಳಿಗ್ಗೆ 11:00 ಕ್ಕೆ ವಿಶ್ವವಿದ್ಯಾನಿಲಯದ ಎಂ.ಬಿ.ಎ. ಕಟ್ಟಡದ ಸಭಾಂಗಣದಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–II ರ ಪ್ರಕರಣ 16(i)ರ ರೀತ್ಯ ನಡಾವಳಿ ತಲುಪಿದ ಏಳು ದಿನಗಳೊಳಗಾಗಿ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

07/01/2025

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಹಣಕಾಸು/ಪರೀಕ್ಷಾಂಗ/ಶೈಕ್ಷಣಿಕ/ಮಾಸನಿ/ಅಭಿವೃದ್ಧಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ/ಆರ್.ಎನ್.ಡಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007.

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:04.01.2025ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ, ಮಾನ್ಯ ಕುಲಪತಿಗಳು. : ಅಧ್ಯಕ್ಷರು
2. ಶ್ರೀ ಅಬ್ದುಲ್ ಜಬ್ಬಾರ್, ಮಾನ್ಯ ವಿದಾನ ಪರಿಷತ್ತಿನ ಸದಸ್ಯರು : ಸದಸ್ಯರು
3. ಶ್ರೀ ಬಾಬುಕುಮಾರ್ ಓ, ಪ್ರಾಂಶುಪಾಲರು : ಸದಸ್ಯರು
4. ಡಾ. ಗಿರೀಶ್ ಟಿ, ಪ್ರಾಂಶುಪಾಲರು : ಸದಸ್ಯರು
5. ಡಾ. ಜೋಮನ್ ಕೆ. ಜೆ, ಪ್ರಾಂಶುಪಾಲರು : ಸದಸ್ಯರು
6. ಶ್ರೀ ತಿಪ್ಪೇಶ್ ಜಿ.ಆರ್, ಪ್ರಾಂಶುಪಾಲರು : ಸದಸ್ಯರು
7. ಶ್ರೀಮತಿ ಉಷಾ ಎಸ್. ಆರ್, ಪ್ರಾಂಶುಪಾಲರು : ಸದಸ್ಯರು
8. ಡಾ. ಅಂಜನಪ್ಪ ಡಿ.ಕೆ., ಪ್ರಾಂಶುಪಾಲರು : ಸದಸ್ಯರು
9. ಡಾ. ರವಿ ಎಸ್. ಪಿ, ಪ್ರಾಂಶುಪಾಲರು : ಸದಸ್ಯರು
10. ಶ್ರೀ ಎಸ್. ಮುರಿಗೇಂದ್ರಪ್ಪ, ಪ್ರಾಂಶುಪಾಲರು : ಸದಸ್ಯರು
11. ಡಾ. ಎ. ಜೆ. ನೀತಾ, ಪ್ರಾಂಶುಪಾಲರು : ಸದಸ್ಯರು
12. ಡಾ. ರವಿಕುಮಾರ್ ಪಾಟೀಲ್ ಹೆಚ್.ಎಸ್, ಪ್ರಾಧ್ಯಾಪಕರು : ಸದಸ್ಯರು
13. ಡಾ. ಮಮತ ಜಿ. ಪಿ., ಪ್ರಾಧ್ಯಾಪಕರು : ಸದಸ್ಯರು
14. ಡಾ. ವಿರುಪಾಕ್ಷಯ್ಯ ಡಿ.ಬಿ.ಎಂ, ಪ್ರಾಧ್ಯಾಪಕರು : ಸದಸ್ಯರು
15. ಡಾ. ವೆಂಕಟರಾವ್ ಎಂ. ಪಲಾಟೆ, ಪ್ರಾಧ್ಯಾಪಕರು : ಸದಸ್ಯರು
16. ಡಾ. ಸುಚಿತ್ರ ಎಸ್., ಡೀನರು, ಕಲಾ ನಿಕಾಯ : ಸದಸ್ಯರು
17. ಡಾ. ಮಹಾಬಲೇಶ್ವರ ಯು.ಎಸ್., ಡೀನರು, ವಿಜ್ಞಾನ ನಿಕಾಯ ಹಾಗೂ ನಿರ್ದೇಶಕರು ವಿದ್ಯಾರ್ಥಿ ಕಲ್ಯಾಣ ಘಟಕ : ಸದಸ್ಯರು
18. ಡಾ. ಶಶಿಧರ್ ಆರ್, ಡೀನರು, ವಾಣಿಜ್ಯ ನಿಕಾಯ : ಸದಸ್ಯರು
19. ಡಾ. ವೆಂಕಟೇಶ್ ಕೆ, ಶಿಕ್ಷಣ ನಿಕಾಯ, : ಸದಸ್ಯರು
20. ಡಾ. ಪ್ರಕಾಶ ಡಿ.ಜಿ. ನಿರ್ದೇಶಕರು, ಪಿ.ಎಂ.ಇ. ಬೋರ್ಡ್ : ಸದಸ್ಯರು
21. ಡಾ. ರಂಗಪ್ಪ ಕೆ.ಬಿ., ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು. : ಸದಸ್ಯರು
22. ಶ್ರೀ ದ್ಯಾಮನಗೌಡ ಮುದ್ದನಗೌಡ್ರ, ಹಣಕಾಸು ಅಧಿಕಾರಿಗಳು : ಸದಸ್ಯರು
23. ಡಾ. ಮಹಾಬಲೇಶ್ವರ ಯು.ಎಸ್, ಕುಲಸಚಿವರು, ಆಡಳಿತ (ಪ್ರಭಾರೆ) ಹಾಗೂ ಡೀನರು, ವಾಣಿಜ್ಯ ನಿಕಾಯ. : ಸದಸ್ಯ ಕಾರ್ಯದರ್ಶಿ

ಪ್ರಾರಂಭದಲ್ಲಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ, ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು. ನಂತರ ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(a)–(01/25) |

## –: ಟಿಪ್ಪಣಿ :–

**ವಿಷಯ: ದಿನಾಂಕ:27.09.2024 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ ಕುರಿತು.**

*****

ದಿನಾಂಕ:27.09.2024 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ ದಿನಾಂಕ:16.10.2024ರಂದು ಕಳುಹಿಸಲಾಗಿತ್ತು. ಈ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:27.09.2024ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭಾ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(b)–(01/25) |

## –: ಟಿಪ್ಪಣಿ :–

**ವಿಷಯಃ ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರದ ಕರಡು ಪರಿನಿಯಮಗಳನ್ನು ಅನುಮೋದಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರಕ್ಕೆ ಸಂಬಂಧಿಸಿದ Draft Statutes Governing the Institution of Dr. Babu Jagjivan Ram Centre for Research and Extension Activities in Davangere University – ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಬೇಕಾಗಿರುವುದರಿಂದ ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರಕ್ಕೆ ಸಂಬಂಧಿಸಿದ – Draft Statutes Governing the Institution of Dr. Babu Jagjivan Ram Centre for Research and Extension Activities in Davangere University – ಕರಡು ಪರಿನಿಯಮಗಳನ್ನು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(c)-(01/25) |

## -ಃ ಟಿಪ್ಪಣಿ ಃ-

ವಿಷಯಃ ವಿಶ್ವವಿದ್ಯಾನಿಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಮತ್ತು ಗೌರವ ಡಾಕ್ಟರೇಟ್ ಪದವಿಗಳನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದ ಪರಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು

*****

ವಿಶ್ವವಿದ್ಯಾನಿಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಮತ್ತು ಗೌರವ ಡಾಕ್ಟರೇಟ್ ಪದವಿಗಳನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದ – Draft Statutes Governing the Withdrawal of Academic Degrees/ Diplomas/ Honoris Causa Degrees Conferred by Davangere University – ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಬೇಕಾಗಿರುವುದರಿಂದ ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಮತ್ತು ಗೌರವ ಡಾಕ್ಟರೇಟ್ ಪದವಿಗಳನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದ – Draft Statutes Governing the Withdrawal of Academic Degrees/ Diplomas/ Honoris Causa Degrees Conferred by Davangere University – ಕರಡು ಪರಿನಿಯಮಗಳನ್ನು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(d)–(01/25) |

## –: ಟಿಪ್ಪಣಿ :–

ವಿಷಯ: ಗೌರವ ಪದವಿಗಳು ಹಾಗೂ ಶೈಕ್ಷಣಿಕ ಪದವಿಗಳನ್ನು ನೀಡುವುದಕ್ಕೆ ಸಂಬಂಧಿಸಿದ ಪರಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು

*****

ವಿಶ್ವವಿದ್ಯಾನಿಲಯದ ಗೌರವ ಪದವಿಗಳು ಹಾಗೂ ಶೈಕ್ಷಣಿಕ ಪದವಿಗಳನ್ನು ನೀಡುವುದಕ್ಕೆ ಸಂಬಂಧಿಸಿದ – Draft Statutes Governing the Conferment of Honoris causa (Honorary Degrees) Degrees and Academic Degrees in Davangere University – ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಬೇಕಾಗಿರುವುದರಿಂದ ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಗೌರವ ಪದವಿಗಳು ಹಾಗೂ ಶೈಕ್ಷಣಿಕ ಪದವಿಗಳನ್ನು ನೀಡುವುದಕ್ಕೆ ಸಂಬಂಧಿಸಿದ – Draft Statutes Governing the Conferment of Honoris causa (Honorary Degrees) Degrees and Academic Degrees in Davangere University – ಕರಡು ಪರಿನಿಯಮಗಳನ್ನು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(a)-(01/25) |

## -: ಟಿಪ್ಪಣಿ :-

ವಿಷಯಃ **2024-25ನೇ ಶೈಕ್ಷಣಿಕ ಸಾಲಿನ ಎಂ.ಬಿ.ಎ. ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆ ಕುರಿತು.**

*****

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಂ.ಬಿ.ಎ. ಸ್ನಾತಕೋತ್ತರ ಪದವಿಯ ಪ್ರವೇಶಾತಿಗೆ ಸಂಬಂಧಿಸಿದಂತೆ, 2023-24ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಜಿ.ಸಿ.ಇ.ಟಿ. ಮುಖಾಂತರ ಪ್ರವೇಶ ಪಡೆದ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕವನ್ನೇ 2024-25ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಜಿ.ಸಿ.ಇ.ಟಿ. ಮುಖಾಂತರ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕವನ್ನು ಮುಂದುವರಿಸಲಾಗಿರುತ್ತದೆ. ಆದರೆ, ಪಿ.ಜಿ.ಸಿ.ಇ.ಟಿ. ಮುಖಾಂತರ ಭರ್ತಿಯಾಗದೇ ಬಾಕಿ ಉಳಿದ ಸೀಟುಗಳಿಗೆ 2023-24ನೇ ಶೈಕ್ಷಣಿಕ ಸಾಲಿನಲ್ಲಿ ನಿಗಧಿಪಡಿಸಿದ ಶುಲ್ಕದಲ್ಲಿ ಶೇ.10ರಷ್ಟು ಹೆಚ್ಚಿಸಿ ರೂ.95,000/- ಸರಿದೂಗಿಸುವಂತೆ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಕುರಿತು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**: 2024-25 ಶೈಕ್ಷಣಿಕ ಸಾಲಿನ ಪದವಿ MBA ಶುಲ್ಕದ ವಿವರ:**

| SL. NO. | FEES DETAILS | (I Year MBA FEES) FOR PG CET STUDENTS | | (II Year MBA FEES) FOR PG CET STUDENTS | | (I Year MBA FEES) FOR Non-PG CET SEATS | | (II Year MBA FEES) FOR Non-PG CET SEATS | |
|---|---|---|---|---|---|---|---|---|---|
| | | SC/ST/C1 (Rs.) | Others (Rs.) | SC/ST/C1 (Rs.) | Others (Rs.) | SC/ST/C1 (Rs.) | Others (Rs.) | SC/ST/C1 (Rs.) | Others (Rs.) |
| 1 | ADMISSION FEE | 5832 | 5832 | 5832 | 5832 | 25184 | 25184 | 25184 | 25184 |
| 2 | TUTION FEE | 31560 | 31560 | 31560 | 31560 | 31560 | 31560 | 31560 | 31560 |
| 4 | LIBRARY FEE | 880 | 880 | 880 | 880 | 880 | 880 | 880 | 880 |
| 5 | GYMKHANA FEE | 550 | 550 | 550 | 550 | 550 | 550 | 550 | 550 |
| 6 | COURSE DEVELOPMENT FEE | 1850 | 1850 | 1850 | 1850 | 1850 | 1850 | 1850 | 1850 |
| 7 | MEDICAL EXAMINATION FEE | 171 | 171 | 171 | 171 | 171 | 171 | 171 | 171 |
| 8 | REGISTRATION FEE | 2000 | 2000 | 00 | 00 | 2000 | 2000 | 00 | 00 |
| 9 | SPORTS FEE | 220 | 220 | 220 | 220 | 220 | 220 | 220 | 220 |
| 10 | STUDENT WELFARE FUND | 140 | 140 | 140 | 140 | 140 | 140 | 140 | 140 |
| 11 | TEACHER WELFARE FUND | 165 | 165 | 165 | 165 | 165 | 165 | 165 | 165 |
| 12 | READER ALLOWANCE | 303 | 5832 | 303 | 303 | 303 | 2000 | 2000 | 2000 |
| 13 | TRANSFER CERTIFICATE FEE | 715 | 31560 | 715 | 715 | 715 | 220 | 220 | 220 |
| 14 | STUDY CERTIFICATE FEE | 50 | 880 | 50 | 50 | 50 | 140 | 140 | 140 |
| 15 | NSS FEE | 160 | 550 | 160 | 160 | 160 | 165 | 165 | 165 |
| 16 | ID CARD FEE | 55 | 1850 | 55 | 55 | 55 | 55 | 55 | 55 |
| 17 | SPORTS DEVELOPMENT FEE | 242 | 171 | 242 | 242 | 242 | 242 | 242 | 242 |
| 18 | SOFT SKILLS DEVELOPMENT FEE | 1039 | 2000 | 1039 | 1039 | 1039 | 1039 | 1039 | 1039 |
| 19 | MEDICAL FEE | 200 | 220 | 200 | 200 | 200 | 200 | 200 | 200 |
| 20 | EDUCATION TECHNOLOGY | 990 | 140 | 990 | 990 | 990 | 990 | 990 | 990 |
| 21 | RED CROSS | 50 | 165 | 50 | 50 | 50 | 50 | 50 | 50 |
| 22 | UNIVERSITY PLACEMENT FEE | 250 | 250 | 250 | 250 | 250 | 250 | 250 | 250 |
| 23 | UNIVERSITY DEVELOPMENT FEE | 00 | 00 | 00 | 00 | 28226 | 28226 | 28226 | 28226 |
| | **TOTAL :** | **47422** | **47422** | **45422** | **45422** | **95000** | **95000** | **93000** | **93000** |

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಂ.ಬಿ.ಎ. ಸ್ನಾತಕೋತ್ತರ ಪದವಿಗೆ ಪಿ.ಜಿ.ಸಿ.ಇ.ಟಿ. ಮುಖಾಂತರ ಭರ್ತಿಯಾಗದೇ ಬಾಕಿ ಉಳಿದ ಸೀಟುಗಳಿಗೆ 2023-24ನೇ ಶೈಕ್ಷಣಿಕ ಸಾಲಿನಲ್ಲಿ ನಿಗದಿಗೊಳಿಸಿದ್ದ ಶುಲ್ಕಕ್ಕೆ 2024-25ನೇ ಶೈಕ್ಷಣಿಕ ಸಾಲಿಗೆ ಶೇಕಡ 10% ರಷ್ಟು ಹೆಚ್ಚಿಸಿದ ಈ ಮೇಲ್ಕಂಡ ಪ್ರವೇಶ ಶುಲ್ಕದ ತಃಖ್ತೆಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(b)–(01/25) |

## –: ಟಿಪ್ಪಣಿ :–

**ವಿಷಯ: 2024–25ನೇ ಶೈಕ್ಷಣಿಕ ಸಾಲಿನ ಎಂ.ಸಿ.ಎ. ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆಯ ಕುರಿತು.**

*****

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಂ.ಸಿ.ಎ. ಸ್ನಾತಕೋತ್ತರ ಪದವಿಯ ಪ್ರವೇಶಾತಿಗೆ ಸಂಬಂಧಿಸಿದಂತೆ, 2023–24ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಜಿ.ಸಿ.ಇ.ಟಿ. ಮುಖಾಂತರ ಪ್ರವೇಶ ಪಡೆದ ಸೀಟುಗಳಿಗೆ ನಿಗಧಿಪಡಿಸಿದ ಪ್ರವೇಶ ಶುಲ್ಕವನ್ನೇ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಜಿ.ಸಿ.ಇ.ಟಿ. ಮುಖಾಂತರ ಪ್ರವೇಶ ಪಡೆದ ವಿದ್ಯಾರ್ಥಿಗಳು ಪ್ರವೇಶ ಶುಲ್ಕವನ್ನು ಮುಂದುವರಿಸಲಾಗಿರುತ್ತದೆ. ಆದರೆ ಪಿ.ಜಿ.ಸಿ.ಇ.ಟಿ. ಮುಖಾಂತರ ಭರ್ತಿಯಾಗದೇ ಬಾಕಿ ಉಳಿದ ಸೀಟುಗಳಿಗೆ 2023–24ನೇ ಶೈಕ್ಷಣಿಕ ಸಾಲಿನಲ್ಲಿ ನಿಗಧಿಪಡಿಸಿದ ಶುಲ್ಕದಲ್ಲಿ ಶೇ.10ರಷ್ಟು ಹೆಚ್ಚಿಸಿ ರೂ.90,000/– ಸರಿದೂಗಿಸುವಂತೆ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಕುರಿತು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**: 2024–25 ಶೈಕ್ಷಣಿಕ ಸಾಲಿನ MCA ಪದವಿಯ ಶುಲ್ಕದ ವಿವರ:**

| SL. NO. | FEES DETAILS | (I Year MCA FEES) FOR PG CET STUDENTS | | (II Year MCA FEES) FOR PG CET STUDENTS | | (I Year MCA FEES) FOR Non-PG CET SEATS | | (II Year MCA FEES) FOR Non-PG CET SEATS | |
|---|---|---|---|---|---|---|---|---|---|
| | | SC/ST/C1 (Rs.) | Others (Rs.) | SC/ST/C1 (Rs.) | Others (Rs.) | SC/ST/C1 (Rs.) | Others (Rs.) | SC/ST/C1 (Rs.) | Others (Rs.) |
| 1 | ADMISSION FEE | 15000 | 15000 | 15000 | 15000 | 15000 | 15000 | 15000 | 15000 |
| 2 | TUTION FEE | 31560 | 31560 | 31560 | 31560 | 31560 | 31560 | 31560 | 31560 |
| 3 | LABORATORY FEE | 8050 | 8050 | 8050 | 8050 | 8050 | 8050 | 8050 | 8050 |
| 4 | LIBRARY FEE | 2000 | 2000 | 2000 | 2000 | 2000 | 2000 | 2000 | 2000 |
| 5 | GYMKHANA FEE | 550 | 550 | 550 | 550 | 550 | 550 | 550 | 550 |
| 6 | COURSE DEVELOPMENT FEE | 3000 | 3000 | 3000 | 3000 | 3000 | 3000 | 3000 | 3000 |
| 7 | MEDICAL EXAMINATION FEE | 150 | 150 | 150 | 150 | 150 | 150 | 150 | 150 |
| 8 | REGISTRATION FEE | 2000 | 2000 | 00 | 00 | 2000 | 2000 | 00 | 00 |
| 9 | SPORTS FEE | 200 | 200 | 200 | 200 | 200 | 200 | 200 | 200 |
| 10 | STUDENT WELFARE FUND | 140 | 140 | 140 | 140 | 140 | 140 | 140 | 140 |
| 11 | TEACHER WELFARE FUND | 165 | 165 | 165 | 165 | 165 | 165 | 165 | 165 |
| 12 | READER ALLOWANCE | 300 | 300 | 300 | 300 | 300 | 300 | 300 | 300 |
| 13 | TRANSFER CERTIFICATE FEE | 715 | 715 | 715 | 715 | 715 | 715 | 715 | 715 |
| 14 | STUDY CERTIFICATE FEE | 50 | 50 | 50 | 50 | 50 | 50 | 50 | 50 |
| 15 | NSS FEE | 160 | 160 | 160 | 160 | 160 | 160 | 160 | 160 |
| 16 | ID CARD FEE | 55 | 55 | 55 | 55 | 55 | 55 | 55 | 55 |
| 17 | SPORTS DEVELOPMENT FEE | 242 | 242 | 242 | 242 | 242 | 242 | 242 | 242 |
| 18 | SOFT SKILLS DEVELOPMENT FEE | 1000 | 1000 | 1000 | 1000 | 1000 | 1000 | 1000 | 1000 |
| 19 | MEDICAL FEE | 200 | 200 | 200 | 200 | 200 | 200 | 200 | 200 |
| 20 | EDUCATION TECHNOLOGY | 937 | 937 | 937 | 937 | 937 | 937 | 937 | 937 |
| 21 | RED CROSS | 50 | 50 | 50 | 50 | 50 | 50 | 50 | 50 |
| 22 | UNIVERSITY PLACEMENT FEE | 250 | 250 | 250 | 250 | 250 | 250 | 250 | 250 |
| 23 | UNIVERSITY DEVELOPMENT FEE | 00 | 00 | 00 | 00 | 23226 | 23226 | 23226 | 23226 |
| **TOTAL** | | **66774** | **66774** | **64774** | **64774** | **90000** | **90000** | **88000** | **88000** |

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಂ.ಸಿ.ಎ. ಸ್ನಾತಕೋತ್ತರ ಪದವಿಗೆ ಪಿ.ಜಿ.ಸಿ.ಇ.ಟಿ. ಮುಖಾಂತರ ಭರ್ತಿಯಾಗದೇ ಬಾಕಿ ಉಳಿದ ಸೀಟುಗಳಿಗೆ 2023–24ನೇ ಶೈಕ್ಷಣಿಕ ಸಾಲಿನಲ್ಲಿ ನಿಗದಿಗೊಳಿಸಿದ್ದ ಶುಲ್ಕಕ್ಕೆ 2024–25ನೇ ಶೈಕ್ಷಣಿಕ ಸಾಲಿಗೆ ಶೇಕಡ 10% ರಷ್ಟು ಹೆಚ್ಚಿಸಿದ ಈ ಮೇಲ್ಕಂಡ ಪ್ರವೇಶ ಶುಲ್ಕದ ತಃಖ್ತೆಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(c)-(01/25) |

## -ಃ ಟಿಪ್ಪಣಿ ಃ-

**ವಿಷಯಃ 2024-25ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ಸ್ನಾತಕ ಪದವಿಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆ ಕುರಿತು.**

*********

ವಿಶ್ವವಿದ್ಯಾನಿಲಯದ ಸ್ನಾತಕ ಬಿ.ಇಡಿ. ಪದವಿಯ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ, 2022-23 ಹಾಗೂ 2023-24 ಶೈಕ್ಷಣಿಕ ಸಾಲಿನಲ್ಲಿ ಶುಲ್ಕ ಪರಿಷ್ಕರಣೆಯಾಗಿರುವುದಿಲ್ಲ. ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ ಪದವಿಯ ಪ್ರವೇಶಾತಿಗೆ ಸಂಬಂಧಿಸಿದಂತೆ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:14.08.2024ರಂದು ನಡೆದ ಡೀನರ ಸಭೆಯಲ್ಲಿ 2024-25ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ಸ್ನಾತಕ ಪದವಿಯ ಪ್ರವೇಶಾತಿ ಶುಲ್ಕದ ವಿವರಗಳ ಮೊತ್ತದ ಪರಿಷ್ಕರಣೆ ಮಾಡುವುದರೊಂದಿಗೆ ಶುಲ್ಕವನ್ನು ಶೇ.10 ರಷ್ಟು ಹೆಚ್ಚಿಸಿ ಶುಲ್ಕದ ಮೊತ್ತವನ್ನು Round-Off to Next Rs.10 ಮಾಡಿ ಸರಿದೂಗಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು, ಸದರಿ ಶುಲ್ಕವನ್ನು ಪ್ರಸ್ತುತ ಸಾಲಿನಿಂದಲೇ ಪಾವತಿಸುವ ಕುರಿತು ಚರ್ಚಿಸಲು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**:2024-25ನೇ ಸಾಲಿನ ಬಿ.ಇಡಿ. ಶುಲ್ಕದ ವಿವರ:**

| Sl. No. | Particulars | Fees Details | |
|---|---|---|---|
| | | 1st Year | 2nd Year |
| 01 | Admission Fee (University) | 2000 | 2000 |
| 02 | Registration | 1000 | - |
| 03 | University Development Fund | 2580 | 2580 |
| 04 | Sports Development Fund | 530 | 530 |
| 05 | ECA | 530 | 530 |
| 06 | Career Guidance Fund | 60 | 60 |
| 07 | Rovers & Rangers (Scouts & Guides) | 50 | 50 |
| 08 | Poor Student Fund | 40 | 40 |
| 09 | Zymkhana Fee | 550 | 550 |
| | **TOTAL** | **7340** | **6340** |

| | | |
|---|---|---|
| 01 | Within State University Fees ( Migration Fee) | **865** |
| 02 | Out of State University Fees | **3380** |

**NOTE (1):** The following fees to be collected by the concerned Colleges & shall be utilized for the Purpose for which it is collected.

| Sl. No. | Particulars | Total |
|---|---|---|
| 1 | Sport Development Fee | 86 |
| 2 | ECA | 86 |
| 3 | Red Cross | 86 |
| 4 | Skill Development | 166 |
| | **TOTAL** | **424** |

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಬಿ.ಇಡಿ. ಪದವಿಯ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ, ದಿನಾಂಕ:14.08.2024 ರಂದು ವಿಶ್ವವಿದ್ಯಾನಿಲಯದಲ್ಲಿ ನಡೆದ ಡೀನರ ಸಭೆಯಲ್ಲಿ - 2023-24ನೇ ಸಾಲಿನಲ್ಲಿ ನಿಗದಿಗೊಳಿಸಿದ ಶುಲ್ಕಕ್ಕೆ 2024-25ನೇ ಶೈಕ್ಷಣಿಕ ಸಾಲಿಗೆ **ಶೇಕಡ 10% ರಷ್ಟು ಹೆಚ್ಚಿಸಿ ಪರಿಷ್ಕರಿಸಿದ** ಶುಲ್ಕದ ಮೊತ್ತವನ್ನು Round-Off to Next Rs.10 ಮಾಡಿ 2024-25ನೇ ಶೈಕ್ಷಣಿಕ ಸಾಲಿನಿಂದಲೇ ಅನ್ವಯವಾಗುವಂತೆ ತೆಗೆದುಕೊಂಡಿರುವ ಡೀನರ ಸಭೆಯ ನಿರ್ಣಯವನ್ನು ಹಾಗೂ ಈ ಮೇಲ್ಕಂಡ ಶುಲ್ಕ ತಃಖ್ತೆಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(d)-(01/25) |

## -: ಟಿಪ್ಪಣಿ :-

**ವಿಷಯ: ಸರ್ಕಾರಿ (ಸ್ವಾಯುತ್ತ) ಕಲಾ ಕಾಲೇಜಿನ ಸ್ನಾತಕೋತ್ತರ ಪದವಿಯ ಪ್ರವೇಶಾತಿ ಶುಲ್ಕ ಪಾವತಿಯ ಕುರಿತು.**

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:14.08.2024ರಂದು ನಡೆದ ಡೀನರ ಸಭೆಯಲ್ಲಿ ಚರ್ಚಿಸಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕೋತ್ತರ ಕಾಲೇಜುಗಳಿಗೆ 2024-25ನೇ ಸಾಲಿನಲ್ಲಿ ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದ ಶುಲ್ಕವನ್ನು ನಿಗಧಿಪಡಿಸಲಾಗಿತ್ತು. ಹಾಗೆಯೇ ಸರ್ಕಾರಿ ಕಲಾ (ಸ್ವಾಯತ್ತ) ಕಾಲೇಜು, ಚಿತ್ರದುರ್ಗದ ಸ್ನಾತಕೋತ್ತರ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೂ ಸಹ ಇತರೆ ಕಾಲೇಜುಗಳಿಗೆ ನಿಗಧಿಪಡಿಸಿರುವ ಶುಲ್ಕವನ್ನೇ ಪಾವತಿಸಲು ತಿಳಿಸಲಾಗಿತ್ತು. ಅದರಂತೆ, ಸದರಿ ಸಂಸ್ಥೆಯು 2017-18ನೇ ಶೈಕ್ಷಣಿಕ ಸಾಲಿನವರೆಗೆ ಪೂರ್ಣ ಶುಲ್ಕವನ್ನು ಜಮೆ ಮಾಡಿರುತ್ತಾರೆ. ಆದರೆ, 2018-19ನೇ ಶೈಕ್ಷಣಿಕ ಸಾಲಿನಿಂದ 2023-24ನೇ ಶೈಕ್ಷಣಿಕ ಸಾಲಿನವರೆಗೆ ಇತರೆ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸದೆ ನೋಂದಣಿ ಶುಲ್ಕವನ್ನು ಮಾತ್ರ ಪಾವತಿಸಿರುವುದು ಕಂಡುಬಂದಿರುತ್ತದೆ.

ಆದ್ದರಿಂದ, 2024-25ನೇ ಶೈಕ್ಷಣಿಕ ಸಾಲಿನಿಂದ ಇತರೆ ಕಾಲೇಜುಗಳಿಗೆ ನಿಗಧಿಪಡಿಸಿರುವ ಶುಲ್ಕವನ್ನೇ ಸ್ವಾಯತ್ತ ಸಂಸ್ಥೆಯಾದ ಸರ್ಕಾರಿ ಕಲಾ (ಸ್ವಾಯತ್ತ) ಕಾಲೇಜು, ಚಿತ್ರದುರ್ಗ - ಇವರು ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಶುಲ್ಕವನ್ನು ಜಮಾ ಮಾಡುವ ಬಗ್ಗೆ ದಿನಾಂಕ:26.09.2024ರಂದು ನಡೆದ ಡೀನರ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಗಿರುತ್ತದೆ. ಸದರಿ ವಿಷಯದ ಕುರಿತು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**:: ನಿರ್ಣಯ ::**

ಸರ್ಕಾರಿ ಕಲಾ (ಸ್ವಾಯತ್ತ) ಕಾಲೇಜು, ಚಿತ್ರದುರ್ಗ ಇವರು - ವಿಶ್ವವಿದ್ಯಾನಿಲಯವು ತನ್ನ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ ಪದವಿ ಕಾಲೇಜುಗಳ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾದ ಪ್ರವೇಶ ಶುಲ್ಕದ ಮಾದರಿಯಲ್ಲಿ - ಸರ್ಕಾರಿ ಕಲಾ (ಸ್ವಾಯತ್ತ) ಕಾಲೇಜು, ಚಿತ್ರದುರ್ಗ ಇವರು 2024-25ನೇ ಶೈಕ್ಷಣಿಕ ಸಾಲಿನಿಂದ ನೊಂದಣಿ ಶುಲ್ಕದ ಜೊತೆಗೆ ವಿಶ್ವವಿದ್ಯಾನಿಲಯ ಇತರೆ ಕಾಲೇಜುಗಳಿಗೆ ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಸಂಶೋಧನಾ ಹಾಗೂ ಅಭಿವೃದ್ಧಿ ಕೋಶ (ಪಿಹೆಚ್.ಡಿ) | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.03(a)–(01/25) |

## –: ಟಿಪ್ಪಣಿ :–

**ವಿಷಯ:** **ಡಾ. ಅನೂಪ್ ರಿತ್ತಿ, ಸಹಾಯಕ ಪ್ರಾಧ್ಯಾಪಕರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯತೆ ನೀಡಿರುವ ಕುರಿತು.**

*********

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ. ಅನುಪ್ ರಿತ್ತಿ, ಇವರು ಪಿಹೆಚ್.ಡಿ. ಪದವಿಯನ್ನು ಪಡೆದುಕೊಂಡು ತಮ್ಮನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡುವಂತೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಮನವಿ ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯಂತೆ 2024–25ನೇ ಸಾಲಿನಿಂದ ಇವರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡಲಾಗಿದೆ. ಹಾಗೂ ಸದರಿ ವಿಷಯವನ್ನು **ದಿನಾಂಕ:30.11.2024 ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ.** ಆದ್ದರಿಂದ ಸದರಿ ವಿಷಯವನ್ನು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಸಂಶೋಧನೆಯನ್ನು ಮುಂದುವರೆಸಲು ಅನುಕೂಲವಾಗುವಂತೆ ಡಾಕ್ಟರೇಟ್ (ಪಿ.ಹೆಚ್.ಡಿ) ಪದವಿ ಪಡೆದಿರುವ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನುಪ್ ರಿತ್ತಿ, ಸ್ನಾತಕೋತ್ತರ ಗಣಕ ವಿಜ್ಞಾನ ಅಧ್ಯಯನ ವಿಭಾಗ ಇವರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(a)–(01/25) |

## –: ಟಿಪ್ಪಣಿ :–

**ವಿಷಯಃ ದಿನಾಂಕ:28.10.2024ರಂದು ಜರುಗಿದ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಎರಡನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.**

*********

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು – ಇಲ್ಲಿ ದಿನಾಂಕ:28.10.2024ರಂದು ಜರುಗಿದ ವಿಶ್ವವಿದ್ಯಾನಿಲಯದ 2024–25ನೇ ಆರ್ಥಿಕ ವರ್ಷದ **ಎರಡನೇ ಹಣಕಾಸು** ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು **ದಿನಾಂಕ:30.11.2024 ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ ನಡಾವಳಿಗಳನ್ನು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಎರಡನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಕುರಿತು ಸುದೀರ್ಘವಾಗಿ ಚರ್ಚಿಸಿದ ಬಳಿಕ ಸಭೆಯು ನಡಾವಳಿಗಳನ್ನು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(b)–(01/25) |

## –: ಟಿಪ್ಪಣಿ :–

**ವಿಷಯ: ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಪರಿಷ್ಕೃತ ಆಂತರಿಕ ಆಯ–ವ್ಯಯ ಶೀರ್ಷಿಕೆಯ ಅನುಮೋದನೆ ಕುರಿತು.**

*********

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ನಿಯಮ '48' ರ ಪ್ರಕಾರ 2024–25ನೇ ಸಾಲಿನ ಮಧ್ಯಂತರ ಪರಿಷ್ಕೃತ ಆಯ–ವ್ಯಯ ಅಂದಾಜನ್ನು **ದಿನಾಂಕ:30.11.2024 ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ ಆಯವ್ಯಯವನ್ನು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಮಧ್ಯಂತರ ಪರಿಷ್ಕೃತ ಆಯ–ವ್ಯಯ ಅಂದಾಜು ಕುರಿತು ಸುಧೀರ್ಘವಾಗಿ ಚರ್ಚಿಸಿದ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(c)–(01/25) |

# –: ಟಿಪ್ಪಣಿ :–

**ವಿಷಯ: ಎಸ್.ಬಿ.ಐ. ಫೇ ಆನ್‌ಲೈನ್ ಸ್ವೀಕೃತಿ ಮಾಡಿ ಎಸ್.ಬಿ.ಐ ಸಂಗ್ರಹಣೆ ಬ್ಯಾಂಕ್ ಮೂಲಕ ಪ್ರವೇಶ ಶುಲ್ಕವನ್ನು ಸ್ವೀಕರಿಸಲು ಅನುಮೋದಿಸುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನಿಂದ ಸ್ನಾತಕ/ ಸ್ನಾತಕೋತ್ತರ ವಿಭಾಗಗಳ ಪ್ರವೇಶ ಶುಲ್ಕವನ್ನು ಎಸ್.ಬಿ.ಐ. ಆನ್‌ಲೈನ್ ಸ್ವೀಕೃತಿ ಅಂದರೆ ಕ್ರೆಡಿಟ್ ಕಾರ್ಡ್/ಡೆಬಿಟ್ ಕಾರ್ಡ್/ಪೋನ್ ಪೇ/ ಗೂಗಲ್ ಪೇ ಹಾಗೂ ಇತರೆ ಯು.ಪಿ.ಐ. ಅಪ್ಲಿಕೇಷನ್‌ಗಳ ಮೂಲಕ ಸ್ವೀಕೃತಿ ಮಾಡಿ ಎಸ್.ಬಿ.ಐ. ಸಂಗ್ರಹಣೆ ಬ್ಯಾಂಕ್ ಮೂಲಕ ಪ್ರವೇಶ ಶುಲ್ಕಗಳನ್ನು ನೇರವಾಗಿ ಪ್ರವೇಶ ಖಾತೆಗೆ ಜಮೆಯಾಗುವುದರಿಂದ ವಿದ್ಯಾರ್ಥಿಗಳ ಮಾಹಿತಿಯು ಸಹ ಆನ್‌ಲೈನ್ ಮೂಲಕ ಲಭ್ಯವಾಗುವುದರಿಂದ ಲೆಕ್ಕ ಸಮನ್ವಯಗೊಳಿಸಲು ಸುಗಮವಾಗಲಿದೆ. ಆದ್ದರಿಂದ, ಸದರಿ ವಿಷಯವನ್ನು **ದಿನಾಂಕ:30.11.2024 ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ಸದರಿ ವಿಷಯನ್ನು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು – ಕ್ರೆಡಿಟ್ ಕಾರ್ಡ್/ ಡೆಬಿಟ್ ಕಾರ್ಡ್/ ಪೋನ್ ಪೇ/ ಗೂಗಲ್ ಪೇ ಹಾಗೂ ಇತರೆ ಯು.ಪಿ.ಐ. ಅಪ್ಲಿಕೇಷನ್‌ಗಳ ಮೂಲಕ ಸ್ವೀಕರಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು          ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(d)-(01/25) |

## -ಃ ಟಿಪ್ಪಣಿ ಃ-

**ವಿಷಯಃ ಶ್ರೀನಾಥ್ ಬಿದರೆ ರವರು ದೃಶ್ಯಕಲಾ ಮಹಾವಿದ್ಯಾಲಯದ ಹಳೆ ವಿದ್ಯಾರ್ಥಿಯಾಗಿದ್ದು ದತ್ತಿ ಉಪನ್ಯಾಸ ಹಾಗೂ ಕಲಾ ಚಟುವಟಿಕೆಗಳ ಕಾರ್ಯಕ್ರಮಕ್ಕೆ ರೂ.1.00 ಲಕ್ಷ ಠೇವಣಿ ಇಡುವ ಕುರಿತು.**

ಉಲ್ಲೇಖ:
1. ಶ್ರೀನಾಥ ಬಿದರೆ ಇವರು ಮನವಿ ಪತ್ರದ ದಿನಾಂಕ:18.10.2024
2. ಪ್ರಾಚಾರ್ಯರು, ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ ಇವರ ಪತ್ರ ಸಂಖ್ಯೆ:ವಿದೃಕಮ/ಅಭಿವೃದ್ಧಿ/2024-25/97 ದಿನಾಂಕ:18.10.2024.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀನಾಥ ಬಿದರೆಯವರು ದೃಶ್ಯಕಲಾ ಮಹಾವಿದ್ಯಾಲಯದ ಹಳೆ ವಿದ್ಯಾರ್ಥಿಯಾಗಿದ್ದು ಇವರು ತಮ್ಮ ತಂದೆಯವರ ಸ್ಮರಣಾರ್ಥ ರೂ.1,00,000/- ಗಳನ್ನು ದತ್ತಿ ನಿಧಿಯನ್ನು ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆಯುವ ದತ್ತಿ ಉಪನ್ಯಾಸ ಹಾಗೂ ಕಲಾ ಚಟುವಟಿಕೆಗಳ ಕಾರ್ಯಕ್ರಮಕ್ಕೆ ಠೇವಣಿ ಇಡುವಂತೆ ಕೋರಿರುತ್ತಾರೆ. ಸದರಿ ಮೊತ್ತವನ್ನು ಠೇವಣಿ ರೂಪದಲ್ಲಿ ಇಟ್ಟು ಬರುವ ಬಡ್ಡಿ ಮೊತ್ತವನ್ನು ಸಂಬಂಧಿಸಿದ ಉದ್ದೇಶಕ್ಕೆ ಬಳಸುವ ಕುರಿತು **ದಿನಾಂಕ:30.11.2024 ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ಸದರಿ ವಿಷಯನ್ನು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ಶ್ರೀನಾಥ ಬಿದರೆಯವರು ತಮ್ಮ ತಂದೆಯವರ ಸ್ಮರಣಾರ್ಥ ರೂ.1,00,000/- ಗಳ ದೇಣಿಗೆ ನೀಡಿರುವ ಮೊತ್ತವನ್ನು ಬ್ಯಾಂಕ್‌ನಲ್ಲಿ ಠೇವಣಿ (Fixed Deposit) ರೂಪದಲ್ಲಿಟ್ಟು, ಅದರಿಂದ ಬರುವ ಬಡ್ಡಿ ಮೊತ್ತದಿಂದ ಸದರಿಯವರ ಕೋರಿಕೆಯಂತೆ ಪ್ರತಿ ವರ್ಷ ಅವರ ತಂದೆಯವರಾದ ಬಿದರೆ ನಾರಾಯಣರಾವ್ ಇವರ ಜನ್ಮದಿನದ ಪ್ರಯುಕ್ತ ಮೇ-28 ರಂದು ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ದತ್ತಿ ಉಪನ್ಯಾಸ ಹಾಗೂ ಕಲಾ ಚಟುವಟಿಕೆಗಳ ಕಾರ್ಯಕ್ರಮವನ್ನು ಏರ್ಪಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(e)–(01/25) |

## –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯದ 2009–10ನೇ ಸಾಲಿನ ಹಾಗೂ ಪ್ರಸ್ತುತ ವಿಶ್ವವಿದ್ಯಾನಿಲಯವು ಕಛೇರಿ ಕಾರ್ಯಗಳಿಗೆ ಹೊಂದಿರುವ ಉಳಿತಾಯ ಮತ್ತು ಚಾಲ್ತಿ ಖಾತೆಗಳ ಅನುಮೋದನೆ ಕುರಿತು.**

*********

ವಿಶ್ವವಿದ್ಯಾನಿಲಯದ 2009–10ನೇ ಸಾಲಿನಿಂದ ಪ್ರಸ್ತುತ ಆರ್ಥಿಕ ವರ್ಷದವರೆಗೂ ವಿಶ್ವವಿದ್ಯಾನಿಲಯವು ಕಛೇರಿ ಕಾರ್ಯಗಳಿಗೆ ಉಪಯೋಗಿಸುತ್ತಿರುವ ಉಳಿತಾಯ ಮತ್ತು ಚಾಲ್ತಿ ಖಾತೆಗಳ ವಿವರವನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ **ದಿನಾಂಕ:30.11.2024 ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ಸದರಿ ವಿಷಯನ್ನು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯವು 2009–10ನೇ ಸಾಲಿನಿಂದ ಪ್ರಸ್ತುತ ಆರ್ಥಿಕ ವರ್ಷದವರೆಗಿನ ಕಛೇರಿ ಕಾರ್ಯಗಳಿಗೆ ಉಪಯೋಗಿಸುತ್ತಿರುವ ಉಳಿತಾಯ ಮತ್ತು ಚಾಲ್ತಿ ಖಾತೆಗಳ ವಿವರವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(f)–(01/25) |

## –: ಟಿಪ್ಪಣಿ :–

ವಿಷಯ: **2024–25ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸ್ವೀಕೃತವಾದ ಮೊತ್ತವನ್ನು ಟೆಂಡರ್ ಮೂಲಕ ಆಯ್ಕೆಯಾದ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿಗೆ ತೊಡಗಿಸಿರುವ ಕುರಿತು.**

*********

2024–25ನೇ ಹಣಕಾಸು ವರ್ಷದಲ್ಲಿ ವಿಶ್ವವಿದ್ಯಾನಿಲಯದ ಹಣವನ್ನು ಆರ್.ಆರ್.ಬಿ ಸೇರಿದಂತೆ ವಿವಿದ ರಾಷ್ಟ್ರೀಕೃತ ಹಾಗೂ ಸಾರ್ವಜನಿಕ ವಲಯದ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಇ–ಪ್ರೋಕ್ಯರ್‌ಮೆಂಟ್ ಮೂಲಕ ಟೆಂಡರ್ ಅಹ್ವಾನಿಸಲಾಗಿತ್ತು, ಸದರಿ ಟೆಂಡರ್‌ನಲ್ಲಿ ಹೆಚ್ಚಿನ ಬಡ್ಡಿದರ ಸೂಚಿಸಿರುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿಯನ್ನು ತೊಡಗಿಸಲಾಗಿರುವುದನ್ನು **ದಿನಾಂಕ:30.11.2024 ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ಸದರಿ ವಿಷಯನ್ನು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯವು 2024–25ನೇ ಹಣಕಾಸು ವರ್ಷದಲ್ಲಿ ವಿಶ್ವವಿದ್ಯಾನಿಲಯದ ಹಣವನ್ನು ಆರ್.ಆರ್.ಬಿ ಸೇರಿದಂತೆ ವಿವಿದ ರಾಷ್ಟ್ರೀಕೃತ ಹಾಗೂ ಸಾರ್ವಜನಿಕ ವಲಯದ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಇ–ಪ್ರೋಕ್ಯರ್‌ಮೆಂಟ್ ಮೂಲಕ ಟೆಂಡರ್ ಅಹ್ವಾನಿಸಿ, ಸದರಿ ಟೆಂಡರ್‌ನಲ್ಲಿ ಹೆಚ್ಚಿನ ಬಡ್ಡಿದರ ಸೂಚಿಸಿದ ಭಾರತೀಯ ಸ್ಟೇಟ್ ಬ್ಯಾಂಕ್(SBI)ನಲ್ಲಿ ನಿಶ್ಚಿತ ಠೇವಣಿ ತೊಡಗಿಸಿರುವುದನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(g)–(01/25) |

## –ಃ ಟಿಪ್ಪಣಿ ಃ–

**ವಿಷಯಃ ವಿಶ್ವವಿದ್ಯಾನಿಲಯದ ಜಿಮ್ಖಾನ ಚಟುವಟಿಕೆಗಳಿಗೆ ಪ್ರತ್ಯೇಕ ಉಳಿತಾಯ ಖಾತೆ ತೆರೆಯುವ ಕುರಿತು**

*********

ವಿಶ್ವವಿದ್ಯಾನಿಲಯದ ಜಿಮ್ಖಾನ ವಿಭಾಗದ ಕಾರ್ಯನಿರ್ವಹಣೆಗೆ ಹಾಗೂ ಜಿಮ್ಖಾನ ಶುಲ್ಕವನ್ನು ಸ್ವೀಕರಿಸಲು ಹಾಗೂ ವೆಚ್ಚಗಳಿಗೆ ಪ್ರತ್ಯೇಕವಾಗಿ ಹೊಸ ಎಸ್.ಬಿ.ಐ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಪ್ರಾರಂಭಿಸಬೇಕಾಗಿರುತ್ತದೆ. ಈ ಆದ್ದರಿಂದ, ಸದರಿ ವಿಷಯವನ್ನು **ದಿನಾಂಕ:30.11.2024 ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ ಪಿ.ಜಿ. ಜಿಮ್ಖಾನ ವಿಭಾಗದ ಕಾರ್ಯನಿರ್ವಹಣೆಗೆ ಹಾಗೂ ಜಿಮ್ಖಾನ ಶುಲ್ಕವನ್ನು ಸ್ವೀಕರಿಸಲು ಹಾಗೂ ವೆಚ್ಚಗಳಿಗೆ ಪ್ರತ್ಯೇಕವಾಗಿ ಉಳಿತಾಯ ಖಾತೆಯನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ (SBI) ನಲ್ಲಿ ಪ್ರಾರಂಭಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.04(h)-(01/25) |

## -ः ಟಿಪ್ಪಣಿ ः-

ವಿಷಯಃ ವಿಶ್ವವಿದ್ಯಾನಿಲಯದ ದೃಶ್ಯಕಲಾ ಕಾಲೇಜಿನಲ್ಲಿ ಥೀಮ್ ಪಾರ್ಕ್‌ನ್ನು ಪ್ರಾರಂಭಿಸಿರುವುದರಿಂದ ಸದರಿ ಕಾರ್ಯನಿರ್ವಹಣೆಗಾಗಿ ಹೊಸ ಉಳಿತಾಯ ಖಾತೆ ತೆರೆಯುವ ಕುರಿತು

*********

ವಿಶ್ವವಿದ್ಯಾನಿಲಯದ ದೃಶ್ಯಕಲಾ ಕಾಲೇಜಿನಲ್ಲಿ ಥೀಮ್ ಪಾರ್ಕ್‌ನ್ನು ಆರಂಭಿಸಿರುವುದರಿಂದ ಪ್ರವೇಶ ಶುಲ್ಕಗಳನ್ನು ಸ್ವೀಕರಿಸಲು ಹಾಗೂ ಇದಕ್ಕೆ ಸಂಬಂಧಿಸಿದ ಕಾರ್ಯನಿರ್ವಹಾಣೆಗಾಗಿ ಮತ್ತು ವೆಚ್ಚಗಳಿಗಾಗಿ ಪ್ರತ್ಯೇಕವಾಗಿ ಎಸ್.ಬಿ.ಐ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆಯನ್ನು ತೆರೆಯುವ ಕುರಿತು **ದಿನಾಂಕ:30.11.2024 ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಥೀಮ್ ಪಾರ್ಕ್ ಮತ್ತು ಬಯಲು ರಂಗಮಂದಿರ ಆರಂಭಿಸುವುದರಿಂದ ಪ್ರವೇಶ ಶುಲ್ಕಗಳನ್ನು ಸ್ವೀಕರಿಸಲು ಹಾಗೂ ಇದಕ್ಕೆ ಸಂಬಂಧಿಸಿದ ಕಾರ್ಯನಿರ್ವಹಣೆ ಮತ್ತು ವೆಚ್ಚಗಳಿಗಾಗಿ ಪ್ರತ್ಯೇಕವಾಗಿ ಉಳಿತಾಯ ಖಾತೆಯನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ (SBI) ನಲ್ಲಿ ಪ್ರಾರಂಭಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.05(a)–(01/25) |

## –: ಟಿಪ್ಪಣಿ :–

**ವಿಷಯಃ 12ನೇ ವಾರ್ಷಿಕ ಘಟಿಕೋತ್ಸವ ಪದವಿ ಪ್ರಮಾಣ ಪತ್ರ ಶುಲ್ಕ ಪರಿಷ್ಕರಣೆ ಮಾಡುವ ಕುರಿತು.**

*********

ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಸ್ನಾತಕ, ಸ್ನಾತಕೋತ್ತರ ಮತ್ತು ಪಿಹೆಚ್.ಡಿ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಕಾಲಂ (3) ಮತ್ತು (4) ರಲ್ಲಿ ಪ್ರಸ್ತಾಪಿಸಿರುವ ಘಟಿಕೋತ್ಸವ ಪ್ರಮಾಣ ಪತ್ರ ಶುಲ್ಕಗಳನ್ನು ಈ ಕೆಳಕಂಡಂತೆ ಕಾಲಂ (5) ಮತ್ತು (6) ರಲ್ಲಿ ನಮೂದಿಸಲಾಗಿರುವ ಶೇಕಡ 10% ರಷ್ಟು ಶುಲ್ಕಗಳನ್ನು ಪರಿಷ್ಕರಣೆ ಮಾಡುವ ಸಂಬಂಧ ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| ಕ್ರ. ಸಂ. | ವಿವರ | ಪ್ರಸ್ತುತ ಶುಲ್ಕದ ವಿವರ | | ಒಟ್ಟು ಹೆಚ್ಚಿಸಲಾದ ಶುಲ್ಕದ ವಿವರ | | Rounded Off | |
|---|---|---|---|---|---|---|---|
| | | ಸಾಮಾನ್ಯ | ಎಸ್.ಸಿ/ ಎಸ್.ಟಿ. | ಸಾಮಾನ್ಯ | ಎಸ್.ಸಿ/ ಎಸ್.ಟಿ. | ಸಾಮಾನ್ಯ | ಎಸ್.ಸಿ/ ಎಸ್.ಟಿ. |
| **1** | **2** | **3** | **4** | **5** | **6** | **7** | **8** |
| 1 | ಸ್ನಾತಕ ಪದವಿ | 880.00 | 715.00 | 968.00 | 786.50 | 970.00 | 790.00 |
| 2 | ಸ್ನಾತಕೋತ್ತರ ಪದವಿ | 1,355.00 | 850.00 | 1,490.50 | 935.00 | 1,490.00 | 935.00 |
| 3 | ಪಿಹೆಚ್.ಡಿ. | 2,555.00 | 2,240.00 | 2,810.50 | 2,464.00 | 2,810.00 | 2,465.00 |

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಸ್ನಾತಕ, ಸ್ನಾತಕೋತ್ತರ ಮತ್ತು ಪಿಹೆಚ್.ಡಿ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಕಾಲಂ (3) ಮತ್ತು (4) ರಲ್ಲಿ ಪ್ರಸ್ತಾಪಿಸಿರುವ ಘಟಿಕೋತ್ಸವ ಪ್ರಮಾಣ ಪತ್ರ ಶುಲ್ಕಗಳಿಗೆ ಕಾಲಂ (5) ಮತ್ತು (6) ರಲ್ಲಿರುವಂತೆ **ಶೇಕಡ 10% ರಷ್ಟು ಶುಲ್ಕಗಳನ್ನು ಪರಿಷ್ಕರಣೆ ಮಾಡಿ** ಹಾಗೂ ಕಾಲಂ (7) ಮತ್ತು (8) ರಲ್ಲಿ **Rounded Off** ಮಾಡಲಾದ ಈ ಮೇಲ್ಕಂಡ ಶುಲ್ಕ ತಃಖ್ತೆಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.05(b)–(01/25) |

## –: ಟಿಪ್ಪಣಿ :–

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವ ಸಂಬಂಧ ನಿಯಮಗಳಿಗೆ ಅನುಮೋದನೆ ನೀಡುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವ ಸಂಬಂಧ – Rules Governing the Declaration of Ranks for under Graduate and Post-Graduate Programmes - ನಿಯಮಗಳನ್ನು ರಚಿಸಲಾಗಿದೆ. ತತ್ಸಂಬಂಧವಾಗಿ, ಸದರಿ ನಿಯಮಗಳನ್ನು ದಿನಾಂಕ:04.01.2025ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವ ಸಂಬಂಧ – Rules Governing the Declaration of Ranks for under Graduate and Post-Graduate Programmes - ನಿಯಮಗಳನ್ನು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು          ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.06(a)–(01/25) |

## –: ಟಿಪ್ಪಣಿ :–

**ವಿಷಯ:** **2025–26ನೇ ಶೈಕ್ಷಣಿಕ ಸಾಲಿಗೆ ಈಗಾಗಲೇ ಶಾಶ್ವತ ಸಂಯೋಜನೆಯುಳ್ಳ ಕೋರ್ಸುಗಳು/ಪದವಿಗಳ ಹಾಗೂ ಕೆಲವು ಮುಂದುವರಿಕೆ ಸಂಯೋಜನೆ ಹೊಂದಿರುವ ಕೋರ್ಸುಗಳು/ ಪದವಿಗಳಿಗೆ ಯುಯುಸಿಎಂಎಸ್ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸುವ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:04.10.2024.
2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ ಸಂಯೋ–149/2024–25/2598 ದಿನಾಂಕ:22.10.2024

*********

ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59)ರನ್ವಯ, ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ/ಬಿ.ಇಡಿ./ಬಿ.ಪಿ.ಇಡಿ ಪದವಿ ಕಾಲೇಜುಗಳ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗಿರುತ್ತದೆ. ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕೆಲವು ಕಾಲೇಜುಗಳು ಶಾಶ್ವತ ಸಂಯೋಜನೆ ಹೊಂದಿದ್ದು, 2024–25ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯ ಶಿಕ್ಷಣ ನೀತಿ (SEP) ಅನುಷ್ಠಾನದಡಿ UUCMS ತಂತ್ರಾಂಶದಲ್ಲಿ College Adminನ SEP Request ನೀಡುವಾಗ ಪದವಿ/ಕೋರ್ಸ್‌ಗಳನ್ನು ತಪ್ಪಾಗಿ ನಮೂದಿಸಿದ್ದರು.

ಮುಂದುವರಿದು, ಪ್ರಸ್ತುತ 2025–26ನೇ ಶೈಕ್ಷಣಿಕ ಸಾಲಿಗೆ ಸದರಿ ಕೋರ್ಸ್‌ಗಳ ವಿವರಗಳನ್ನು UUCMS ತಂತ್ರಾಂಶದಲ್ಲಿ ಸರಿಪಡಿಸಿಕೊಡುವಂತೆ UUCMS ನಿರ್ವಾಹಕರಿಗೆ ಪತ್ರಿಸಲಾಗಿದೆ. ಈ ಕುರಿತು UUCMS ಅಧಿಕಾರಿಗಳು, ಮೌಖಿಕವಾಗಿ ಸೂಚಿಸಿರುವಂತೆ – UUCMS ತಂತ್ರಾಂಶದಲ್ಲಿ ಸರಿಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಪೂರ್ವದಲ್ಲಿ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆ ಪಡೆದು ಸದರಿ ಕಾಲೇಜುಗಳ ಶಾಶ್ವತ ಕೋರ್ಸುಗಳಿಗೆ ಈಗಾಗಲೇ ಶಾಶ್ವತ ಸಂಯೋಜನೆ ಆದೇಶಗಳು ಇರುವುದರಿಂದ ಯಾವುದೇ ಶುಲ್ಕ ಪಾವತಿಸಿಕೊಳ್ಳದೇ 2025–26ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಅರ್ಜಿ ಸಲ್ಲಿಸುವಾಗ ಶಾಶ್ವತವೆಂದು ನಮೂದಿಸಿ ಸಲ್ಲಿಸಲು ತಿಳಿಸಿರುತ್ತಾರೆ. ಈ ಕುರಿತು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಅರ್ಜಿ ಸಲ್ಲಿಸುವಾಗ ಪದವಿ/ ಕೋರ್ಸ್‌ಗಳ ವಿವರಗಳನ್ನು ತಪ್ಪಾಗಿ ನಮೂದಿಸಿರುವ ಕಾಲೇಜುಗಳ ಮಾಹಿತಿಯನ್ನು UUCMS ತಂತ್ರಾಂಶದಲ್ಲಿ ಸರಿಪಡಿಸುವಂತೆ UUCMS ಅಧಿಕಾರಿಗಳಿಗೆ ಪತ್ರಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.06(b)-(01/25) |

## -: ಟಿಪ್ಪಣಿ :-

ವಿಷಯ: **2025-26ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಭೌತಿಕ ಪರಿಶೀಲನೆಗೆ ಸ್ಥಳೀಯ ತಪಾಸಣಾ ಸಮಿತಿಗಳನ್ನು ರಚಿಸಿರುವ ಹಾಗೂ ದಿನಭತ್ಯೆ ಮೊತ್ತವನ್ನು ನಿಗದಿಪಡಿಸಿ ಅನುಮೋದಿಸುವ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:04.10.2024.
2. ವಿಶ್ವವಿದ್ಯಾನಿಲಯ ಡೀನರ ಸಮಿತಿ ನಿರ್ಣಯ ದಿ:15.10.2024.
3. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ ಸಂಯೋ-149/2024-25/2598 ದಿನಾಂಕ:22.10.2024

*********

ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59)ರನ್ವಯ, ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ/ಬಿ.ಇಡಿ./ಬಿ.ಪಿ.ಇಡಿ ಪದವಿ ಕಾಲೇಜುಗಳ 2025-26ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ಉಲ್ಲೇಖಿತ (3)ರಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂಧವಾಗಿ, ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳ ಪ್ರಾಂಶುಪಾಲರು/ಆಡಳಿತ ಮಂಡಳಿಯವರು ತಮ್ಮ ಕಾಲೇಜಿನ 2025-26ನೇ ಶೈಕ್ಷಣಿಕ ಸಾಲಿನ ನವೀನ ಸಂಯೋಜನೆ/ ಮುಂದುವರಿಕೆ ಸಂಯೋಜನೆ/ನವೀನ ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ/ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳ/ನವೀನ ಕೋರ್ಸು/ನವೀನ ಐಚ್ಚಿಕ ವಿಷಯ ಇತ್ಯಾದಿಗಳ ಸಂಯೋಜನೆಗಾಗಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಕಾಲೇಜುಗಳು ನೀಡಿರುವ ವಿವರಗಳನ್ನು ಭೌತಿಕವಾಗಿ ಪರಿಶೀಲಿಸುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಭೋಧಕ ಸಿಬ್ಬಂದಿಗಳನ್ನು ಹಾಗೂ ಸ್ನಾತಕೋತ್ತರ ಕಾಲೇಜುಗಳ ಭೌತಿಕ ಪರಿಶೀಲನೆಗೆ ಒಬ್ಬ ಬಾಹ್ಯ ಸದಸ್ಯ (ಅನ್ಯ ವಿಶ್ವವಿದ್ಯಾನಿಲಯದ) ಭೋಧಕರನ್ನೊಳಗೊಂಡಂತೆ ಸಮಿತಿಗಳನ್ನು ರಚಿಸಲಾಗುತ್ತದೆ. ಸ್ಥಳೀಯ ತಪಾಸಣಾ ಸಮಿತಿಗಳಿಗೆ ನಿಯೋಜಿಸಲಾಗುವ ಅಧ್ಯಕ್ಷರು/ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಪಾವತಿಸಲಾಗುವ ಗೌರವ ಸಂಭಾವನೆಯನ್ನು ಕೆಳಕಂಡಂತೆ ನಿಗದಿಪಡಿಸಿ **ದಿನಾಂಕ:30.11.2024ರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ.** ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| **ಕ್ರ.ಸಂ.** | **ವಿವರ** | **2025-26ನೇ ಸಾಲಿನಿಂದ ಅನ್ವಯವಾಗುವಂತೆ** |
|---|---|---|
| 01 | ಅಧ್ಯಕ್ಷರು (ಬಾಹ್ಯ ಸದಸ್ಯರುಗಳನ್ನೊಳಗೊಂಡಂತೆ) | ರೂ.1800/- |
| 02 | ಸದಸ್ಯರು | ರೂ.1500/- |
| 03 | ಬಾಹ್ಯ ಸದಸ್ಯರಿಗೆ ಕಾರು ಮೈಲೇಜು ದರ ಪ್ರತಿ ಕಿ.ಮಿ.ಗೆ (ಉಪಸ್ಥಿತ ಭತ್ಯೆ ಇರುವುದಿಲ್ಲ) | ರೂ.10/- |

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯವು 2025-26ನೇ ಸಾಲಿನ ಸ್ಥಳೀಯ ತಪಾಸಣಾ ಸಮಿತಿಗಳಿಗೆ ನಿಯೋಜಿಸಲಾಗುವ ಅಧ್ಯಕ್ಷರು/ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಈ ಮೇಲ್ಕಂಡ ಪಟ್ಟಿಯಲ್ಲಿರುವಂತೆ ಗೌರವ ಸಂಭಾವನೆಯನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.06(c)-(01/25) |

## -: ಟಿಪ್ಪಣಿ :-

**ವಿಷಯ:** **ಕೆ.ಎಸ್.ಎಸ್. ಎಂ.ಇಡಿ. ಕಾಲೇಜು, ದಾವಣಗೆರೆ - ಇಲ್ಲಿ ಶೈಕ್ಷಣಿಕ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸುವ ಕುರಿತು.**

ಉಲ್ಲೇಖ:
1. ಕೆ.ಎಸ್.ಎಸ್. ಫೌಂಡೇಷನ್ (ರಿ.) ದಾವಣಗೆರೆ ಇವರ ಮನವಿ ಪತ್ರ: ದಿನಾಂಕ:06.09.2024.
2. ಸ್ಥಳೀಯ ತಪಾಸಣಾ ಸಮಿತಿಯ ವರದಿ ದಿ:12.09.2024.

*********

ಕೆ.ಎಸ್.ಎಸ್. ಸಂಸ್ಥೆಯಲ್ಲಿ ಸ್ನಾತಕೋತ್ತರ ಶೈಕ್ಷಣಿಕ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಸಂಬಂಧ, ದಿನಾಂಕ:06.09.2024ರಂದು ಸಂಸ್ಥೆಯ ಮುಖ್ಯಸ್ಥರು ಸಲ್ಲಿಸಿದ ಮನವಿ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕಾಲೇಜು ಅಭಿವೃದ್ಧಿ ಪರಿಷತ್ತು ವಿಭಾಗದ ವತಿಯಿಂದ ದಿನಾಂಕ:12.09.2024ರಂದು ವಿಶ್ವವಿದ್ಯಾನಿಲಯದಿಂದ ನಿಯೋಜನೆಗೊಂಡ ಸ್ಥಳೀಯ ತಪಾಸಣಾ ಸಮಿತಿಯ ಅಧ್ಯಕ್ಷರು/ಸದಸ್ಯರುಗಳು ಸದರಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ, ಶಿಫಾರಸ್ಸು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ (ಪ್ರತಿ ಲಗತ್ತಿಸಿದೆ). ಸದರಿ ಕಾಲೇಜಿನಲ್ಲಿ 2025-26ನೇ ಶೈಕ್ಷಣಿಕ ಸಾಲಿನಿಂದ ಶೈಕ್ಷಣಿಕ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಚರ್ಚಿಸಿ ಮುಂದಿನ ಸೂಕ್ತ ಕ್ರಮಕೈಗೊಳ್ಳಬೇಕಾಗಿರುತ್ತದೆ. ಈ ಕುರಿತು ಸದರಿ ವಿಷಯವನ್ನು **ದಿನಾಂಕ:30.11.2024ರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ.** ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:04.01.2025 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ಸದರಿ ವಿಷಯವನ್ನು ತಾತ್ಕಾಲಿಕವಾಗಿ ಮುಂದೂಡಲಾಯಿತು.

ಕೊನೆಯಲ್ಲಿ ಕುಲಸಚಿವರು (ಆಡಳಿತ, ಪ್ರಭಾರೆ) ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು